**AKSHARASURYA**
Peer-Reviewed, Multi Lingual E-Journal
Volume – 01, Issue – 03, December 2022.

# ಕುಂದಗನ್ನಡ ಜನಪದ ಗಾದೆಗಳಲ್ಲಿ ಸ್ತ್ರೀ ಅಭಿವ್ಯಕ್ತಿ

**ಡಾ.ಚಂದ್ರಾವತಿ ಶೆಟ್ಟಿ**
ಪ್ರಾಂಶುಪಾಲರು/ ಸಹ ಪ್ರಾಧ್ಯಾಪಕರು
ಶ್ರೀ ಶಾರದಾ ಕಾಲೇಜು, ಬಸ್ರೂರು.
ಕುಂದಾಪುರ ತಾ. ಉಡುಪಿ ಜಿಲ್ಲೆ.
chandravathishetty77@gmail.com

ಗಾದೆ ನಿತ್ಯ ಬದುಕಿನೊಂದಿಗೆ ಒಡ ಬೆರೆತಿರುವ ಜನಪದ ಪ್ರಕಾರವಾಗಿದ್ದು, ಮಾತಿನ ಅವಿಭಾಜ್ಯ ಅಂಗವಾಗಿ ಬಳಕೆಯಾಗುತ್ತದೆ. ಸಂಸ್ಕೃತಿಯೊಂದರ ಸಾಮಾಜಿಕ ನಿಯಮಗಳು, ಸಾಂಸ್ಕೃತಿಕ ನಂಬಿಕೆಗಳು, ಮಾನವ ಬದುಕಿನ ನಿರೀಕ್ಷೆಗಳು ಗಾದೆಗಳಲ್ಲಿ ಪ್ರತಿಬಿಂಬಿತಗೊಳ್ಳುತ್ತವೆ. ಇಂತಹ ನಂಬಿಕೆ–ನಡವಳಿಕೆಗಳನ್ನು ಕಾಯ್ದುಗೊಳ್ಳುವಲ್ಲಿ ಸಂವಹನವನ್ನು ಮನದಟ್ಟಾಗಿಸಿ ಅರ್ಥವನ್ನು ಮೊನಚುಗೊಳಿಸುವ ಉದ್ದೇಶವನ್ನು ಗಾದೆಯೊಂದು ಹೊಂದಿರುತ್ತದೆ. ಅವು ರೂಪಕ, ಪ್ರತಿಮೆ, ಸಂಕೇತಗಳ ಮೂಲಕ ಪ್ರಕಟಗೊಳ್ಳುತ್ತದೆ. ಒಂದು ಗಾದೆಯನ್ನು ನಾವು ಬಳಸುತ್ತೇವೆಂದರೆ ಆ ಗಾದೆ ಪ್ರಕಟಿಸುವ ಸಾಂಸ್ಕೃತಿಕಮೌಲ್ಯಗಳನ್ನು ನಾವು ಅಂತರ್ಗತಗೊಳಿಸಿಕೊಂಡಿದ್ದೇವೆ ಎಂದರ್ಥ. ಈ ನೆಲೆಯಲ್ಲಿ ಸಂಸ್ಕೃತಿ ಅಥವಾ ಸಮುದಾಯವೊಂದರ ಮೌಲ್ಯಗಳ ಸೃಷ್ಟಿ ಹಾಗೂ ವಾಹಕವಾಗಿ ಆಕರಗಳಾಗಿ ನಿಲ್ಲುತ್ತವೆ. ಪುರುಷ ಪ್ರಧಾನವಾದ ಸಂಸ್ಕೃತಿಯೊಂದರಲ್ಲಿ ಗಾದೆಗಳ ಉತ್ಪಾದಕರು ಪುರುಷರಾಗಿದ್ದು, ಪುರುಷನ ಅಧಿಕಾರ ಮತ್ತು ಧೋರಣೆಗಳನ್ನು ಮೌಲೀಕರಣಗೊಳಿಸುವಲ್ಲಿ ಪುರುಷಪರವಾಗಿರುತ್ತದೆ. ಇಂತಹ ಪರಿಸರದಲ್ಲಿ ಸಾಂಸ್ಕೃತಿಕ ಮೌಲ್ಯಗಳ ರಚಕರು ಮತ್ತು ನಿಯಂತ್ರಕರು ಪುರುಷರಾಗಿರುವುದು ಹಾಗೂ ಗಾದೆಗಳ ಪ್ರಧಾನ ಉದ್ದೇಶವೇ ಇಂತಹ ಸಾಮಾಜಿಕ ಸಾಂಸ್ಕೃತಿಕ ಮೌಲ್ಯಗಳನ್ನು ನಿರಂತರಗೊಳಿಸುವುದು ಆಗಿರುವಲ್ಲಿ ಮಹಿಳೆಯರು ಗಾದೆ ಮಾತುಗಳನ್ನು ಬಳಸಿದರೂ ಅವರು 'ಪುರುಷ ದನಿ'ಯಲ್ಲೇ ಆಡುತ್ತಾರೆ ಎನ್ನುವ ಸೂಕ್ಷ್ಮವನ್ನು ತಿಳಿಯಬೇಕಾಗಿದೆ.

ಗಾದೆಗಳು ಸಂಸ್ಕೃತಿಯೊಂದರ ಮೌಲ್ಯವಾಹಕವಾಗಿ ಕಾರ್ಯ ನಿರ್ವಹಿಸುತ್ತದೆ. ಒಂದು ಗಾದೆಗೆ ಒಂದೇ ಅರ್ಥ ಎಂದಿಲ್ಲ. ಭಿನ್ನ ಭಿನ್ನ ಸಂದರ್ಭದಲ್ಲಿ ಭಿನ್ನ ಭಿನ್ನ ಅರ್ಥಗಳನ್ನು ಅವು ಹೊಳೆಯಿಸುತ್ತವೆ. ಆಯಾ ಸಂದರ್ಭಕ್ಕೆ ತಕ್ಕಂತೆ ಅವು ಹೊರ ಬರುತ್ತವೆ. ಹೊಸ ಅರ್ಥಪಡೆದುಕೊಳ್ಳುತ್ತವೆ. ಜೀವನ ಸ್ವರೂಪ, ಬದುಕಿನ ವಿನ್ಯಾಸಗಳು ಬದಲಾಗಿ ಹೊಸ ಸಂದರ್ಭಗಳು ಸೃಷ್ಟಿಯಾದಾಗ ಹಳೆಯ ಗಾದೆ, ಹೊಸ ವ್ಯವಸ್ಥೆಯಲ್ಲಿ ಹೊಸ ಅರ್ಥದೊಂದಿಗೆ ಬಳಕೆಯಾಗುತ್ತದೆ.

ಸ್ತ್ರೀವಾದ ತಿಳಿದು ಬಯಸುವ ಲಿಂಗವಿವಕ್ಷೆ ಮತ್ತು ಹೆಣ್ಣು–ಗಂಡಿನ ಹಾಗೂ ಹೆಣ್ಣು–ಹೆಣ್ಣಿನ ನಡುವಿನ ಸಂಬಂಧಗಳನ್ನು ಗಾದೆಗಳು ತಮ್ಮೊಳಗೆ ಹಿಡಿದಿಟ್ಟುಕೊಂಡಿವೆ. ಪಿತೃರೂಪಿ ಮೌಲ್ಯಧಾರಿತ ಸಾಮಾಜಿಕ ಸಂದರ್ಭದಲ್ಲಿ ಹೆಣ್ಣು–ಗಂಡಿನ ನಡುವಿನ ಸಂಬಂಧವು ಲಿಂಗ ವ್ಯವಸ್ಥೆಯ ರೂಪಿಕೆಯಾಗಿರುವಂತೆ ಹೆಣ್ಣು–ಹೆಣ್ಣಿನ ನಡುವಿನ ಸಂಬಂಧವೂ ಆಗಿರುತ್ತದೆ. ಹೆಣ್ಣುಗಳ ನಡುವಣ ಸಂಬಂಧವು ಆಪ್ತ, ಗಾಢವಾಗಿರುವಂತೆ ಅದಕ್ಕೆ ವೈರುಧ್ಯದಲ್ಲೂ ಇರುತ್ತದೆ. ತಾಯಿ–ಮಗಳ, ಅಕ್ಕ–ತಂಗಿಯರ ಸಂಬಂಧ ಬಹುತೇಕವಾಗಿ ಹಿತದ ಭಾವದ್ದಾಗಿದ್ದಾರೆ ಅತ್ತೆ–ಸೊಸೆ, ಅತ್ತಿಗೆ–ನಾದಿನಿಯರ ಸಂಬಂಧ ಅಹಿತಭಾವದ್ದಾಗಿರುತ್ತದೆ. ಕುಂದಗನ್ನಡದ ಪಿತೃರೂಪೀ ಸಾಂಸ್ಕೃತಿಕ ಸಂದರ್ಭದಲ್ಲಿ ಹೆಣ್ಣಿನ ಸುತ್ತಿನ ಯಾವತ್ತೂ ಸಂದರ್ಭಗಳು ಸಂಕೀರ್ಣ ಸ್ವರೂಪದವಾಗಿದ್ದು ಅವು ಬರಿಯ ಸಂಬಂಧಗಳಷ್ಟೇ ಆಗಿರದೆ ಅಧಿಕಾರ ಸಂಬಂಧಗಳಾಗಿರುತ್ತವೆ. ಈ ಬಗೆಯ ವ್ಯವಸ್ಥೆಯಲ್ಲಿ ವಸ್ತುವಾಗಿಯೇ ಪರಿಗ್ರಹಿಸಲ್ಪಟ್ಟ ಹೆಣ್ಣಿಗೆ ತನ್ನ ಬದುಕಿಗೆ ಸಂಬಂಧಿಸಿದಂತೆ ಯಾವುದೇ ಆಯ್ಕೆ ಸಾಧ್ಯವಿಲ್ಲ. ಅದು ಅವಳ ವಿವಾಹದ ಪ್ರಶ್ನೆಯಾಗಬಹುದು. ಲೈಂಗಿಕತೆಯ ಪ್ರಶ್ನೆಯಾಗಬಹುದು ಅಥವಾ ಸಂತಾನದಂತಹ ಪ್ರಶ್ನೆಯಾಗಬಹುದು ಇದರಂತೆ ಆಕೆ ಬದುಕಿನಲ್ಲಿ ರೂಢಿಸಿಕೊಳ್ಳಬೇಕಾದ ಸಂಬಂಧಗಳೂ ಕೂಡ. ಹೀಗೆ ಹೇರಲ್ಪಟ್ಟ ಅಸಹಜ ಸಂಬಂಧಗಳು ಹಾಗೂ ಅವುಗಳೊಂದಿಗೆ ಹೆಣ್ಣು ಸ್ಥಾಪಿಸಿಕೊಳ್ಳಬೇಕಾದ ಬಂಧುತ್ವಕ್ಕೆ ಅನಿವಾರ್ಯತೆಯ ಒತ್ತಡವಿದೆ.

ಕುಂದಗನ್ನಡ ಜನಪದರ ಪಿತೃರೂಪೀ ಸಂಸ್ಕೃತಿಯಲ್ಲಿ ಅತ್ತೆ–ಸೊಸೆಯರ ಸಂಬಂಧ ವಿಚಿತ್ರ ಸಂಬಂಧವಾಗಿರುವುದು. ಪುರುಷ ಪ್ರಧಾನ ಮೌಲ್ಯಗಳು ಅತ್ತೆಗೆ ನೀಡಿದ ಅಧಿಕಾರದಿಂದ ಈ ಪುರುಷಪರ ಮೌಲ್ಯಗಳು ಬಹಳ ಬಾರಿ ಮಹಿಳೆಯರನ್ನು ರಂಗಸ್ಥಳದಲ್ಲಿ ನಿಲ್ಲಿಸಿ ಪುರುಷನನ್ನು ತೆರೆಯ ಹಿಂದಿಟ್ಟು ಕಾಪಾಡುತ್ತದೆ. ಮಹಿಳೆಯರ ನಡುವೆ ಸೀಳು ತಂದು ಹೆಣ್ಣಿಗೆ ಹೆಣ್ಣೇ ಶತ್ರು ಎನ್ನುವ ಸಂದರ್ಭ ಸೃಷ್ಟಿಯಾಗುವುದು ಪುರುಷ ವ್ಯವಸ್ಥೆಯ ಈ ತಂತ್ರದಿಂದ. ಈ ಹೆಣ್ಣುಗಳ ಸಂಬಂಧಗಳ ಸ್ವರೂಪ ಯಾವ ಬಗೆಯದು ಎನ್ನುವುದನ್ನು ಗಾದೆಗಳು ಅನೇಕ ಮಗ್ಗುಲುಗಳಲ್ಲಿ ವಿವರಿಸುತ್ತವೆ.

1. ಅತ್ತೆ ಕಾರುಬಾರು ಸೊಸೆ ಮೇಲೆ
2. ಅತ್ತೆ ಒಡೆದ ಗಡಿಗೆಗೆ ಬೆಲೆಯಿಲ್ಲ.

ಈ ಮುಂತಾದ ಗಾದೆಗಳು ಕುಟುಂಬದೊಳಗೆ ಅತ್ತೆಗಿರುವ ಅಧಿಕಾರವನ್ನು ಹೇಳಿದರೆ ಅತ್ತೆ–ಸೊಸೆಯರ ವಿಷಯ ಸಂಬಂಧಗಳನ್ನು ಈ ಮುಂದಿನ ಗಾದೆ ಮಾತುಗಳು ನಿರೂಪಿಸುತ್ತವೆ.

1. ಸೊಸೆಗೆ ಬೆಂಕಿ ಹತ್ತಿದರೆ ಅತ್ತರ ಸೀರೆ ಸುಟ್ಟು ಹೋಯಿತ್ತಲ್ಲ ಎಂದಳಂತೆ.
2. ಅತ್ತಿತ್ತೆಲ ಮಾರಿ ಬಂದು ಅತ್ತೆಯ ಬಡ್ಕಂಡು ಹೋಗಲಿ
3. ಸೊಸೆ ಸತ್ತರೆ ಸೋಬಾನ ಮಗ ಸತ್ತರೆ ಮಸಣ.

ತಾಯಿ–ಮಗಳ ಬಾಂಧವ್ಯ ಎಲ್ಲ ಸಮಾಜದಲ್ಲೂ ಆಪ್ತವಾದದ್ದು ಆತ್ಮೀಯವಾದದ್ದು ಈ ಸಂಬಂಧ ಲೋಕದ ಯಾವ ಸಂಬಂಧಕ್ಕೂ ಸರಿಸಾಟಿ ಇಲ್ಲದ್ದು ಎನ್ನುವುದಕ್ಕೆ ಗಾದೆ ತನ್ನದೇ ವ್ಯಾಖ್ಯಾನ ನೀಡಿದೆ.

1. ಉಪ್ಪಿಗಿಂತ ರುಚಿಯಿಲ್ಲ. ತಾಯಿಗಿಂತ ಬಂಧುವಿಲ್ಲ.
2. ತಾಯಿಯಿಲ್ಲದ ತವರು ನೀರಿಲ್ಲದ ಕೆರೆ.
3. ನೂಲಿನಂತೆ ಸೀರೆ ತಾಯಿಯಂತೆ ಮಗಳು–ಸಮಾಜದಲ್ಲಿ ಹೆಣ್ಣೊಬ್ಬಳಿಗೆ ಮಗಳು ಮತ್ತು ಸೊಸೆಯರ ಮೇಲಿರುವ ಒಲವಿನ ಸಂಬಂಧಗಳನ್ನು ಹೇಳುತ್ತದೆ.
4. ಸೊಸೆ ಕುಟ್ಟಬೇಕು, ಮಗಳು ಗೇರಬೇಕು.
5. ಮಗಳಿಗೆ ಉಳಿಸಿಕೊಡುವುದು, ಸೊಸೆಗೆ ಉಳಿದರೆ ಕೊಡುವುದು.

ಪುರುಷ ಪ್ರಧಾನತೆಯಲ್ಲಿ ಹೆಣ್ಣಿನ ಮೂಕತೆಯನ್ನು ಆದರ್ಶ–ನಿಷೇಧದ ನೆಲೆಯಲ್ಲಿ ವ್ಯವಸ್ಥಿತವಾಗಿ ಸೃಷ್ಟಿಸಲಾಗಿದೆ. ಒಂದು ಕಡೆ 'ಹೆಣ್ಣಿಗೆ ಮಾತು ಹೆಚ್ಚು' ಎಂಬ ಭಯದ ನಿಷೇಧ ಅವಳನ್ನು ಮೂಕಳಾಗಿಸಿದರೆ, ಇನ್ನೊಂದು ಕಡೆ 'ಮಾತು ಬೆಳ್ಳಿ ಮೌನ ಬಂಗಾರ' ಎಂಬ ಆದರ್ಶದಲ್ಲಿ ಆಕೆಯನ್ನು ಮೂಕಲಾಗಿಸಿದೆ. ಹೆಣ್ಣಿನ ಈ ಮೌನವೇ ಕುಟುಂಬದ ಒಳಗೆ ಮತ್ತು ಹೊರಗೆ ಆಕೆಯ ಮೇಲಾಗುವ ಹಿಂಸೆ, ದೌರ್ಜನ್ಯಗಳನ್ನು ಬಹಳ ಬಾರಿ ಮುಚ್ಚಿ ಹಾಕುವಂತಹದು. ಬಾಯಿ ಇದ್ದರೆ ಮಗ ಬದುಕಿಯಾನು ಎನ್ನುವ ಗಾದೆಯಂತೆಬಾಯಿ ಮುಚ್ಚಿಕೊಂಡ ಗಂಡು ಹೇಡಿಯಾಗುತ್ತಾನೆ. ಅದೇ ಹೆಣ್ಣಿನ ಸಂದರ್ಭ ಬಂದಾಗ ತಿರುವುಮುರುವು ಆಗಿ ಬಾಯಿ ತೆಗೆದ ಕ್ಷಣದಲ್ಲಿ ಆಕೆ ಹೆಣ್ಣುತನವನ್ನು ಕಳೆದುಕೊಂಡು ಗಯ್ಯಾಳಿಯಾಗುತ್ತಾಳೆ.

1. ಹರಕು ಬಾಯಿಯ ಹೆಣ್ಣು, ಹೆಣ್ಣಲ್ಲ, ಕೊಳಕು ಮಣ್ಣಿನ ಗದ್ದೆ ಗದ್ದೆಯಲ್ಲ.
2. ಅಂಡೆ ಬಾಯಿ ಕಟ್ಟಬಹುದು, ಮುಂಡೆಬಾಯಿ ಕಟ್ಟಲಾಗದು
3. ಬೊಗಳು ನಾಯಿ ಹೊಡೆಯಬ್ಯಾಡ ತಿಗಳಗತ್ತಿ ಬಾಯಿ ಕೆಣಕಬೇಡ.

ಕುಂದಗನ್ನಡ ಜನಪದದಲ್ಲಿ ಪುರುಷ ನಿಗ್ರಹಕ್ಕೆ ಒಳಪಟ್ಟು ಬದುಕಬೇಕಾಗಿ ಬಂದ ಹೆಣ್ಣಿನ ಬಾಯಿಯ ಮೇಲೆಯೂ ಹತೋಟಿ ಸಾಧಿಸುವ, ಬಾಯಿ ಮುಚ್ಚಿಸುವ ಗಂಡಿನ ಪ್ರಯತ್ನವಾಗಿ ಇಂತಹ ಗಾದೆಗಳನ್ನು ಕಾಣಬಹುದಾಗಿದೆ. ಗಂಡಿನ

ಅಧಿಕಾರಶಾಹಿಯೊಳಗೆ ತನ್ನದ್ದಾಗಿದ್ದ ಎಲ್ಲ ಶಕ್ತಿಯನ್ನು ಮುಚ್ಚಿ ಹಾಕಲ್ಪಟ್ಟ ಸಂದರ್ಭದಲ್ಲಿ ಹೆಣ್ಣಿಗೆ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುವಲ್ಲಿ ಮಾಧ್ಯಮವಾಗಿದ್ದ ಒಂದೇ ಒಂದು ಬಾಯಿಯ ಮೇಲೂ ಪ್ರಭುತ್ವವನ್ನು ಸಾಧಿಸುವ ಪುರುಷನ ಕೌರ್ಯದಲ್ಲಿ ಹೆಣ್ಣಿನಬಾಯಿಯನ್ನು ಅರ್ಥೈಸಬೇಕಾಗಿದೆ.

ಹೆಣ್ಣಿನ ಪ್ರಜನನ ಶಕ್ತಿ ಗಂಡನ್ನು ಬಹುವಾಗಿ ಕಂಗೆಡಿಸಿದ ಸಂಗತಿ. ಈ ಕಂಗೆಡಿಸುವಿಕೆಯಲ್ಲೇ ಆತ ಹೆಣ್ಣು–ಹೆಣ್ಣುತನವನ್ನು ಒಂದು ಮಾಡಿ ಗೊಂದಲ ಉಂಟುಮಾಡಿದ್ದು. ಹೆಣ್ಣಿನ ಇಡಿಯ ವ್ಯಕ್ತಿತ್ವವನ್ನು ಹೆರಿಗೆಯೊಂದಿಗೆ ಸಮೀಕರಿಸಿರುವ ಅನೇಕ ನಿರ್ಬಂಧಗಳನ್ನು ವೈಭವೀಕರಣಗಳನ್ನು ಬಿಡುಗಡೆಗೊಳಿಸಿದ. ಉತ್ತರಾಧಿಕಾರಿಯನ್ನು ಹೆರುವ ಹೆಣ್ಣಿನ ವೈಭವೀಕರಣದಲ್ಲಿ ಹೆರದ ಹೆಣ್ಣಿನ ಹೆಣ್ಣುತನವನ್ನು ಪ್ರಶ್ನೆಗೊಡ್ಡಲಾಯಿತು ಹಾಗೂ ಬಂಜೆಯ ನೆಲೆಯಲ್ಲಿ ಹೀನೈಸಲಾಯಿತು.

1. ಹಡೆದವಳಿಗೆ ಪಟ್ಟೆ ಸೀರೆ, ಹಡೆಯದವಳಿಗೆ ಅಡ್ಕೆ ಹಾಳೆ .
2. ಬಂಜೆ ಹೋದಲ್ಲಿ ಸಂಜೆ .

ಹೆರಿಗೆ ಸಂಗೋಪನದಂತಹ ಜೈವಿಕ ಕಾರಣಗಳಿಂದಲೆ ಹೆಣ್ಣನ್ನು ಖಾಸಗಿ ಜಗತ್ತಿಗೆ ತಳ್ಳುವುದು ಗಂಡಿಗೆ ಸುಲಭವಾಗಿರಬೇಕು. ಹೀಗೆ ಖಾಸಗಿ ಜಗತ್ತಿಗೆ ಖಾಯಂ ಆದ ಹೆಣ್ಣನ್ನು ದೈಹಿಕ ಸ್ವರೂಪದಲ್ಲಷ್ಟೇ ಗ್ರಹಿಸುವುದು ಇನ್ನಷ್ಟು ಸಲೀಸಾಯಿತು. ಬೌದ್ಧಿಕ ಶಕ್ತಿಯನ್ನು ಗಂಡಿನದೆಂದು ಇಡುಗಂಟಾಗಿ ಸ್ಥಾಪಿಸಿಕೊಂಡ ಪುರುಷ ನಿಲುವು ಹೆಣ್ಣನ್ನು ಬುದ್ಧಿಗೇಡಿ, ಅಪಾಯಕಾರಿ ಎಂದೇ ನಿರ್ವಚಿಸಿದೆ. ಮನೆತನದ ಜವಾಬ್ದಾರಿ ನಿರ್ವಹಿಸಿದರೂ ಹೆಣ್ಣಿನ ಪಾತ್ರವನ್ನು ಹೀನಗೊಳಿಸಿಯೆ ನೋಡಲಾಗಿದೆ.

1. ಗಂಡ ಸೀರೆ ತರಲು ಹೋಗಿದ್ದಾನೆಂದು ಉಟ್ಟ ಬಟ್ಟೆ ಸುಟ್ಟುಕೊಂಡಳು
2. ಅಜ್ಜಿ ಸಾಕಿದ ಮಗ ಬೊಜ್ಜಕ್ಕೂ ಬಾರ.
3. ಹೆಣ್ಣಿನ ಬುದ್ಧಿ ಮೊಣಕಾಲ ಕೆಳಗೆ.
4. ಹೆಣ್ಣಿನ ಮಾತು ಕೇಳುವುದೂ ಒಂದೇ ನರಿಯನ್ನು ನಂಬಿ ಕೊಳಕ್ಕೆ ಬೀಳುವುದೂ ಒಂದೆ.

ಗಂಡಿಗೆ ಹೆಣ್ಣಿನ ಕುರಿತಾದ ಭಯ, ಆತಂಕಗಳು ಮುಖ್ಯವಾಗಿ ಅವಳ ಲೈಂಗಿಕತೆಯದು. ಆ ಬಗೆಗಿನ ಗಂಡಿನ ನಿರೀಕ್ಷೆ, ನಿರ್ಬಂಧಗಳು ಹಲವು ನೆಲೆಗಳಲ್ಲಿ ಗಾದೆಗಳಲ್ಲಿ ಕಂಡು ಬರುತ್ತದೆ.

1. ಹೇಂಟೆ ಕೂಗಿದರೆ ಮನೆಗೆ ಮಾಟ, ಹೆಣ್ಣು ಸೊಕ್ಕಿದರೆ ಮನೆಗೆ ಮಣ್ಣು.
2. ಈಡು ಇಲ್ಲದ್ದು ಕೋವಿಯಲ್ಲ, ರೀತಿಯಿಲ್ಲದ್ದು ಹೆಣ್ಣಲ್ಲ.
3. ಸೊಕ್ಕಿದ ಹೆಣ್ಣು ಉಕ್ಕಿದ ಹಾಲು ಎರಡೂ ಒಂದೇ.

ಈ ಭಯದಿಂದಾಗಿಯೇ ಗಂಡಿಗೆ ಹೆಣ್ಣಿನ ಬಗೆಗೆ ಒಂದು ಅಪನಂಬಿಕೆ. ಅನುಮಾನ ಎಲ್ಲಾ ಕಾಲದಲ್ಲೂ ಎಲ್ಲಾ ಸಮಾಜದಲ್ಲಿಯೂ ಇದೆ.

1. ಹೆಣ್ಣಿನ ಗುಣವನ್ನು ಸುಣ್ಣದಲ್ಲಿ ನೋಡಬೇಕು.
2. ಮೀನಿನ ಹೆಜ್ಜೆ ನೋಡಬಹುದು ಹೆಣ್ಣಿನ ಮನಸ್ಸು ನೋಡಲಾಗದು.
3. ಆನೆ ಸಾಕುವವನಿಗೂ ಹೆಣ್ಣನ್ನು ಸಾಕಲು ಆಗಲಿಲ್ಲ.

ಗಂಡು ಉತ್ಪಾದಕನಾಗಿ ಹೆಣ್ಣು ಅನುಭೋಗಿಯಾಗಿರುವ ವ್ಯವಸ್ಥೆಯಲ್ಲಿ ಆಕೆ ಭೋಗದ ವಸ್ತು ಸರಕಾದದ್ದು ಹೆಣ್ಣು ಸಂಸ್ಕೃತಿಯ ಅಪಕರ್ಷದ ಸಂಕೇತ.

ಹೀಗಾಗಿಯೇ ಗಂಡು ತನ್ನ ಬಯಕೆಗೆ ತಕ್ಕಂತೆ ಹೆಣ್ಣನ್ನು ಗ್ರಹಿಸಿದ್ದಾನೆ ಮತ್ತು ನಿಜವಾದ ಹೆಣ್ಣನ್ನು ಮರೆಯಾಗಿಸಿದ್ದಾನೆ. ಗಂಡು ಅರ್ಥೈಸಿದ ಹೆಣ್ಣನ್ನು ಗಾದೆಗಳು ಬಣ್ಣ ಬಣ್ಣದಲ್ಲಿ ಕಟ್ಟಿಕೊಟ್ಟಿದೆ.

1. ಗಂಡಿಗೆ ಎದೆ ಗಟ್ಟಿ ಇರಬೇಕು, ಹೆಣ್ಣಿಗೆ ಸೊಂಟ ಗಟ್ಟಿ ಇರಬೇಕು.
2. ಗಂಡಿಗೆ ತಲೆ ದೊಡ್ಡದಿರಬೇಕು, ಹೆಣ್ಣಿಗೆ ಮೊಲೆ ದೊಡ್ಡದಿರಬೇಕೆ.
3. ಹೆತ್ತವಳ ಮುಖ ಚಂದ, ಹೆರದಿದ್ದವಳ ಮೊಲೆ ಚಂದ
4. ಮೊಲೆ ಜೋತು ಬಿದ್ದ ಹೆಣ್ಣು, ಎಲೆ ಬಾಡಿದ ಮರದಂತೆ.

ಕುಂದಗನ್ನಡ ಜನಪದ ಗೀತೆಗಳಲ್ಲಿ ಹೆಣ್ಣು ದುರ್ಬಲ, ಕನಿಷ್ಟ ವಸ್ತು ಎಂಬ ಗ್ರಹಿಕೆ ಹಾಗೂ ಆಕೆಯ ಬಗೆಗೆ ಗಂಡನ್ನು ಕಾಡಿದ ಭಯ ಆತಂಕಗಳು ಹೆಣ್ಣಿಗೆ ಗಂಡಿನ ರಕ್ಷಣೆಯನ್ನು ಒತ್ತಿ ಒತ್ತಿ ಈ ರೀತಿಯಾಗಿ ಹೇಳಿವೆ.

1. ಗಂಡು ಇದ್ದ ಹೆಣ್ಣಿಗೆ ಆನೆಯಷ್ಟು ಬಲ.
2. ಗೂಟವಿಲ್ಲದ ಬೇಲಿ ಗಂಡನಿಲ್ಲದ ಹೆಣ್ಣು
3. ಅಂಕೆಯಲ್ಲಿದ್ದ ಹೆಣ್ಣು ಮಜ್ಜಿಗೆಯಲ್ಲಿದ್ದ ಬೆಣ್ಣೆ ಕೆಡುವುದಿಲ್ಲ.
4. ಅಜ್ಜಿಯಿಲ್ಲದ ಮನೆ ಬಜ್ಜಿಯಿಲ್ಲದ ಊಟ.

ಕುಂದಗನ್ನಡ ಜನಪದ ಗಾದೆಗಳು ಪುರುಷ ನಿಷ್ಠ ಪ್ರಕಾರವಾಗಿದ್ದು ಒಂದಿಲ್ಲೊಂದು ತೆರದಲ್ಲಿ ಹೆಣ್ಣಿನ ಸಹಜ ಪ್ರವೃತ್ತಿಯನ್ನು ಹೆಣ್ಣುತನದ ಅಭಿವ್ಯಕ್ತಿಯನ್ನು ನಿಯಂತ್ರಿಸಿವೆ. ಹಾಗೆ ಮಾಡುವ ಮೂಲಕ ಪುರುಷನ ಹಿತಾಸಕ್ತಿಗೆ ಬೇಕಾದ ಹೆಣ್ಣುತನವನ್ನು ನಿರ್ಮಾಣ ಮಾಡಿದೆ. ಹೀಗಾಗಿ ಗಾದೆಗಳನ್ನು ಹೆಣ್ಣನ್ನು ತನ್ನ ಅಧೀನಕ್ಕೆ ಒಳಪಡಿಸುವ ಗಂಡಿನ ಕಾರ್ಯತಂತ್ರವಾಗಿಯೇ ಕಂಡುಕೊಳ್ಳಬೇಕಾಗಿದೆ.

ಸ್ತ್ರೀಯನ್ನು ಕುರಿತಂತೆ ಮೂಡಿ ಬಂದಿರುವ ಗಾದೆಗಳನ್ನು ಗಮನಿಸಿದರೆ ಜಾನಪದ ಸೃಷ್ಟಿಕರ್ತರು ತಾಯಾಗಿ, ಹೆಂಡತಿಯಾಗಿ, ಅತ್ತೆಯಾಗಿ, ಓರಗತ್ತಿಯಾಗಿ, ಸವತಿಯಾಗಿ, ಬಂಜೆಯಾಗಿ, ವೇಶ್ಯಾವಾಟಿಕೆಯ ಬಗೆಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಗಾದೆಗಳು ಇವೆ. ಬಹುಶ: ಸಮಾಜದ ಪರಿಶುದ್ಧತೆಯನ್ನು ಕಾಪಾಡಿಕೊಳ್ಳುವುದಕ್ಕಾಗಿ ಇಂತಹ ಟೀಕೆಗಳು ಎದ್ದಿರಬಹುದೆಂಬುದು ಜಾನಪದ ವಿದ್ವಾಂಸರ ಅಭಿಪ್ರಾಯವಾಗಿದೆ.

ಕುಂದಗನ್ನಡ ಜನಪದ ಗಾದೆಗಳಲ್ಲಿ ಬಡ–ಬಗ್ಗರ ಸ್ತ್ರೀಯರನ್ನು ಕಾಣುವ ಪರಿಯೂ ವಿಶೇಷವಾಗಿದೆ. "ಬಡವನ ಹೆಂಡತಿ ಬೇಲಿಯಲ್ಲಿನ ಹೂವಿನಂತೆ" ಆಕೆ ಜನಸಾಮಾನ್ಯರ ಕಣ್ಣಿಗೆ ಬಾಯಿಗೆ ಸುಲಭವಾಗಿ ತುತ್ತಾಗುತ್ತಾಳೆ. "ಬಡವನ ಕೋಪ ದವಡೆಗೆ ಮೂಲ" ಎಂಬಂತೆ ಅಪ್ಪಿ–ತಪ್ಪಿಯೂ ಪ್ರತಿಭಟಿಸದೆ ಎಲ್ಲವನ್ನೂ ಸಹಸಿಕೊಳ್ಳಬೇಕು. ಅವಳ ಶೀಲ ರೂಪಗಳೆನೇ ಇದ್ದರೂ, ನೋಡುವ ಆಡುವ ಜನಕ್ಕೆ ಮಾತ್ರ ಮೀಸಲು. ಜನಪದ ಸ್ತ್ರೀ ಬೇಲಿ ಮೇಲಿನ ಹೂವಿನಂತೆ ಸುಲಭವಾಗಿ ಸಿಗುವವಳು ರಕ್ಷಣೆಯಿಲ್ಲದವಳು. "ಬರೀ ಮಗ್ಗುಲಿಗಿಂತ ಕಡೆಯೆ ಬಡವರ ಹುಡುಗಿ" ಎಂಬ ಗಾದೆ ಕೂಡ ಇದೇ ದು:ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. "ಹಸಿದವಳು ಯಾರು ಅಂದ್ರೆ; ಮಾಸಿದ ಸೀರ್‍ಯೋಳು" ಅಂದಂಗೆ ಬಡವನ ಪಾಲಿಗೆ ಉಳಿದ್ದೇಂದರೆ ಬಂದದ್ದನ್ನು ಅನುಭವಿಸುವುದೊಂದೇ ದಾರಿ. ತನಗುಂಟಾದ ದು:ಖ ದುಮ್ಮಾನಗಳನ್ನು ಮೌನವಾಗಿ ನುಂಗಿಕೊಳ್ಳಬೇಕಾಗುತ್ತದೆ. 'ಬಡವ ನೀನು ಮಡಗಿದಂಗಿರು' ಎಂಬಂತೆ ಎದುರಾದುದನ್ನು ತಡೆದುಕೊಂಡು ಸದ್ದಿಲ್ಲದೇ ಬಿದ್ದಿರಬೇಕೆನ್ನುತ್ತದೆ. ಅದೇ ಪುರುಷ ಉದ್ದೇಶ ಪೂರ್ವಕವಾಗಿ ಎಂಥ ವ್ಯಭಚಾರವನ್ನೇ ಮಾಡಿದರೂ ಲೋಕದಲ್ಲಿನ ಸ್ಥಾನಮಾನಗಳು ಕಂಡೂ ಕಾಣದಂತೆ ಮುಚ್ಚಿ ಹಾಕುತ್ತದೆ. ಪುರುಷ ಮಾಡಿದ ಹಾದರವನ್ನು ಕಂಡು ಅಲಕ್ಷಿಸಿದ ಸಮಾಜ ಸ್ತ್ರೀ ಮಾಡಿದ ಅಲ್ಲ ತಪ್ಪನ್ನು ಸಂಶಯಾಸ್ಪದವಾಗಿ

ನೋಡಿ ಕಟಕಿಯಾಡುತ್ತದೆ. "ಆರು ದೋಸೆ ಕೊಟ್ರೆ ಅತ್ತೆ ಕಡೆ; ಮೂರು ದೋಸೆ ಕೊಟ್ರೆ ಸೊಸೆ ಕಡೆ" ಎಂಬಂತೆ ಅದು ಯಾವಾಗಲೂ ಪುರುಷರ ಪರವಾಗಿರುತ್ತದೆ.

"ಕೊಟ್ಟ ಹೆಣ್ಣು ಕುಲಕ್ಕೆ ಹೊರಗು" ಹೆಣ್ಣನ್ನು ಹೊತ್ತು ಹೆತ್ತು ಬೆಳೆಸಿ ಮತ್ತೊಂದು ಮನೆಗೆ ಮದುವೆ ಮಾಡಿ ಕೊಟ್ಟವರು ಹಲವು ಕಾರಣಗಳಿಗಾಗಿ ಗಂಡಿನವರಿಗೆ ವಿಧೇಯರಾಗಿ ತಗ್ಗಿ ಬಗ್ಗಿ ನಡೆಯಬೇಕಾಗುತ್ತದೆ.

"ಬಡವನ ಹೆಂಡ್ತಿ ಊರಿಗೆಲ್ಲಾ ಅತ್ತಿಗೆ"

ಬಡವನ ಹೆಂಡ್ತಿಗೆ ಊರೆಲ್ಲಾ ಅತ್ತೆ"

"ಹಬ್ಬುಕ್ಕಿ ಇಬ್ಬುರೆಡ್ತೀರ್ ತಂದು ಹಬ್ಬುಕ್ಕಿಲ್ದೆ ಒಬ್ಬುಳ ಮಾರುದ್ನಂತೆ"

"ಅಮ್ಮಕ್ಕುನ್ ಸೀರೆ ತಿಮ್ಮಕ್ಕುನ್ ರವಕೆ ಕಂಡ್ ಕಂಡೋರೆಲ್ಲ ಹುಯ್ಯುರ್ಲಾ ಧಾರೆಯ"

"ಕಡೇ ಮನೆಯ ಒಡೆಯಾಕವಳೆ ಅಂದ್ರೆ, ಹೇತ ತಿಕ್ಕೆ ನೀರು ಹಿಡಿಯೋಕೆ ಅವಳೆ" ಅಂದಳಂತೆ. ಈ ಮುಂತಾದ ಗಾದೆಗಳ ಮೂಲಕ ಸ್ತ್ರೀಯರ ಸ್ಥಾನಮಾನಗಳನ್ನು ಜನಪದರು ಬಹಳ ಮಾರ್ಮಿಕವಾಗಿ ಸೂಚಿಸಿದ್ದಾರೆ.

ಕುಂದಗನ್ನಡ ಜನಪದರ ಅವಿಭಕ್ತ ಕುಟುಂಬದಲ್ಲಿ ಪ್ರಮುಖವಾಗಿ ಗಂಡ–ಹಂಡತಿ, ಅತ್ತೆ ಮಾವ, ಅಕ್ಕ–ತಂಗಿ, ತಂದೆ–ಮಗಳು, ಅಣ್ಣ–ತಂಗಿ, ತಾಯಿ–ಮಗಳು, ಅಕ್ಕ–ಮಗಳು, ಅಕ್ಕ–ತಮ್ಮ, ಅಜ್ಜ–ಅಜ್ಜಿ, ಅತ್ತೆ–ಸೊಸೆ, ಅತ್ತಿಗೆ–ನಾದಿನಿ, ಭಾವ–ನಾದಿನಿ, ಆಳು–ಕಾಳುಗಳೆಲ್ಲ ಇರುತ್ತಾರೆ. ಇಂಥ ಸಮಸ್ತ ಪರಿವಾರದಿಂದ ಕೂಡಿರುವುದು ಸಮಾಜ. ಈ ಸಮಾಜದಲ್ಲಿ ಒಂದೊಂದು ಕುಟುಂಬದ ವ್ಯವಸ್ಥೆ. ಇದಕ್ಕೊಬ್ಬ ಯಜಮಾನನನಿರುವಂತೆ ಯಜಮಾನಿಯೂ ಇರುತ್ತಾಳೆ. ಹೆಣ್ಣಿದ್ದಲ್ಲಿ ಹೊಸದೊಂದು ಪ್ರಪಂಚ ಅವತರಿಸುತ್ತದೆ. ಜೀವನಕ್ಕೆ ನವನವೋಲ್ಲಾಸ ಮೂಡುತ್ತದೆ. "ಸತಿ ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ" ಎಂಬಂತೆ ಗಂಡ–ಹೆಂಡತಿ ಒಂದಾದ ಕುಟುಂಬದಲ್ಲಿ ಶಾಂತಿ ನೆಮ್ಮದಿ ನೆಲಸಿರಬೇಕಾದರೆ ಮನೆಯೊಡತಿಯ ಪಾತ್ರ ಪ್ರಮುಖವಾದುದು. ಆಕೆ ನೀತಿವಂತೆ, ಪ್ರೀತಿವಂತೆ, ಹೃದಯವಂತೆ, ಶೀಲವಂತೆಯಾಗಿರಬೇಕು; ಮನೆ ಮಂದಿಗೆಲ್ಲ ಮಾರ್ಗದರ್ಶಕಳೂ ಆಗಿರಬೇಕು. "ಗರತಿಯಿಂದ ಗೌಡ;" ಗೃಹಣೀ ಗೃದ ಮುಚ್ಚತೆ; "ನೀರಿದ್ರೆ ಊರು, ನಾರಿ ಇದ್ರೆ ಮನೆ;" ಇತ್ಯಾದಿ ಗಾದೆಗಳು ಆಕೆಯ ಸಹನೆ, ತಾಳ್ಮೆ, ಕ್ಷಮೆ, ದಯೆಯನ್ನು ಚಿತ್ರಿಸುವುದರ ಮೂಲಕ ಹೆಣ್ಣು ಕುಟುಂಬದ ಮೇಟಿ ಎಂಬುದನ್ನು ಪ್ರಸ್ತುತ ಪಡಿಸುತ್ತದೆ.

ಹೊರ ಜಗತ್ತಿಗೆ ಯಜಮಾನ ಮುಖ್ಯ ಎನಿಸಿದರೂ "ಸಂತೇಲಿ ಅವ್ವ ನ್ನೋಡಿದ್ಮೇಲೆ, ಮನೇಲಿ ಮಗಳ ನೋಡುವುದೇನು? "ತಾಯಂತೆ ಮಗಳು ನೂಲ್ನಂತೆ ಸೀರೆ" ತಾಯಿಲ್ಲದ ಮಕ್ಕಳಿಗೆ ಆಯಿಲ್ಲ ಸಿರಿಲ್ಲ", ತಾಯಿದ್ರೆ ತವರು; ತಂದಿದ್ರೆ ಬಳಗ; ಮುಂತಾದ ಗಾದೆಗಳು "ಹೆಣ್ಣು ಸಂಸಾರದ ಕಣ್ಣು"; ಅಂತಹ ಹೆಣ್ಣುಇಲ್ಲವಾದಾಗ ಸಂಸಾರವೆಂಬ ಕೋಟೆಯ ಭದ್ರತೆ ತಪ್ಪಿ ಮಕ್ಕಳಿಗೆ ಆಸರೆಯಿಲ್ಲದೆ ಅನಾಥ ಪ್ರಜ್ಞೆ ಉಂಟಾಗುತ್ತದೆ. ಅಂತಹ ಹೆಣ್ಣನ್ನು ಮನೆಯ ನಂದಾದೀಪವೆನ್ನದೆ ಮತ್ತೇನೆಂದು ಕರೆಯಬೇಕು?

ಮಕ್ಕಳು ಮನೆಯ ಮಾಣಿಕ್ಯವಿದ್ದಂತೆ ಮಕ್ಕಳಿಲ್ಲದವರ ಬಾಳನ್ನು ಅದೆಂತಹ ದುಸ್ತರವೆಂಬುದನ್ನು ಜನಪದ ಸಾಹಿತ್ಯ ನಾನಾ ಬಗೆಯಲ್ಲಿ ಹಾಡಿ ಕಣ್ಣೀರ ಕೋಡಿ ಹರಿಸಿದೆ. 'ಬಂಜೆ ಹೋದಲ್ಲಿ ಸಂಜೆ' ಗೊಡ್ ಬಡ್ದಾ ದೊಡ್ಡಿಗ್ ಬುಟ್ರೂ ಫಲವಿಲ್ಲ" ಮುಂತಾದವು. "ಮಕ್ಕಳಿಲ್ಲದೋಳ್ಗೆ ದಿಕ್ಕಿಲ್ಲ ಹಸಾಕೊಟ್ ಮನ್ಗೆ ಕರಾನೂ ಕೊಡು". "ಪಡೆದವಳಿಗೆ ಪಟ್ಟೆ ಸೀರೆ ಪಡೆಯದವಳಿಗೆ ಮುತ್ತಗದ ಹಾಳೆ." ಈ ಮುಂತಾದ ಗಾದೆಗಳನ್ನು ಯೋಚಿಸಿದಾಗ ಸಮಾಜದಲ್ಲಿ ಪ್ರತಿಯೊಂದು ಜೀವಿಯೂ ನೆಮ್ಮದಿ ಸಂತೋಷವಾಗಿರಲು ಸಾಧ್ಯವಿಲ್ಲ. ಒಂದಲ್ಲ ಒಂದು ಕಾರಣಕ್ಕಾಗಿ ದು:ಖ ದುಮ್ಮಾನಗಳಿದ್ದೇ ಇರುತ್ತವೆ. ಬಂದದ್ದೆಲ್ಲ ಬರಲಿ ಭಗವಂತನ ದಯೆ ಇರಲಿ; 'ಈಸ ಬೇಕು ಇದ್ದು ಜೈಸ ಬೇಕು' ಎಂಬ ಸೂಕ್ತಿಗಳಂತೆ ಎಂಥ ದು:ಖದ ಪರಿಸ್ಥಿತಿಯಲ್ಲೂ ಹೆಣ್ಣು

ಏಕೆ ಬದುಕುತ್ತದೆ? ಹೇಗೆ ಬದುಕುತ್ತದೆ? ಎಂಬುದನ್ನು ಚಿಂತಿಸಿದಾಗ ಪ್ರಾಯ: ಮತ್ತಾವುದೋ ಜೀವಿಯ ಸುಖಕ್ಕೆ ತನ್ನಬಾಳನ್ನೇ ದುರಂತಕ್ಕೊಡ್ಡಿಕೊಂಡು ಎದುರಾದ ಸಂಕಷ್ಟವನ್ನು ಹೊಟ್ಟೆಯಲ್ಲಿ ನುಂಗಿಕೊಂಡು ತಾಳ್ಮೆಯಿಂದ ಹೆಣ್ಣು ಬದುಕಬೇಕಾಗುತ್ತದೆ, ಬದುಕುತ್ತಾಳೆ. ಗಂಡನ ಮನೆಯವರಿಗೆ ಹೆಣ್ಣು ಬೇಡದವಳಾಗಿದ್ದರೂ; ಆಕೆಗೆ ಅತ್ತೆ ಮಾವಂದಿರಿಂದ, ಭಾವ–ಮೈದುನರಿಂದ, ಅತ್ತಿಗೆ–ನಾದಿನಿಯರಿಂದ ಎಂಥ ನರಕ ಸದೃಶ ವಾತಾವರಣವಿದ್ದರೂ ಸಹ ಎಲ್ಲವನ್ನೂ ತಾಳಿಕೊಂಡು, ಮಗುವಿನ ಮುಖ ನೋಡಿ ತನ್ನ ಬಾಳನ್ನು ನೂಕಬೇಕಾಗುತ್ತದೆ. ಒಂದು ವೇಳೆ ಮಗುವಿಲ್ಲದಿದ್ದಲ್ಲಿ ಆಕೆ ಖಂಡಿತ ಆ ನರಕದಲ್ಲಿ ಬಾಳುತ್ತಿರಲಿಲ್ಲವೇನೂ? "ಕರ್ಮೀನರೇಲಿ ಅಸಾ ಬದಿಕ್ಕಣ್ತಿ" ಇಲ್ಲಿ 'ಕರು' ಎಂಬ ಶಬ್ದ ಮಗುವನ್ನು ಸಂಕೇರಿಸುತ್ತದೆ. ಕರುವಿನ ದೆಸೆಯಿಂದಾಗಿ ಅಸು (ತಾಯಿ) ಬದುಕಿಕೊಂಡಳು. ತನ್ನ ಬಾಳಲ್ಲಿ ಬೆಲೆಯನ್ನು ಕಂಡುಕೊಂಡಳು. ತಾನೂ ಬಾಳಿ ತನ್ನಕರುವನ್ನೂ ಬಾಳಿಸಿ ಉತ್ತಮ ಪ್ರಜೆಯಾಗಿ ಎಂಬ ನಾಣ್ಣುಡಿಗಿಂತ ಬೇರಾವ ಬಗೆಯಲ್ಲಿ ಚಿತ್ರಿಸಲು ಸಾಧ್ಯ? ನಿಜಕ್ಕೂ ಜನಪದ ಅನುಭಾವೀ ಕವಿ ತಾನು ದಿನನಿತ್ಯ ಕಂಡುಂಡ ವಾಸ್ತವಿಕ ಪ್ರಪಂಚದಿಂದ ನಿದರ್ಶನಗಳನ್ನು ಪ್ರತಿಮೆ, ಉಪಮೆ ರೂಪಕಗಳ ಮೂಲಕ ನೀಡಿದ್ದಾರೆ.

ಕುಂದಗನ್ನಡ ಜನಪದ ಸೃಷ್ಟಿಕರ್ತರು ಗಾದೆಗಳ ಮೂಲಕ ಹೆಣ್ಣನ್ನು ಹಲವಾರು ಬಗೆಯಲ್ಲಿ ಕಂಡರಿಸಿದ್ದಾರೆ. ಆಕೆಯನ್ನು ಸಹಾನುಭೂತಿಯಿಂದ ನೋಡದೆ ಅನುಮಾನದಿಂದಲೇ ನೋಡಿದ್ದರೆ, ಆಕ್ಷೇಪಣೆಗಳೇ ಹೆಚ್ಚು ಅನುಕಂಪೆಯಿಂದ, ಉದಾರತೆಯಿಂದ ಭಾವಿಸದಿರುವುದನ್ನು ಕಂಡಾಗ ಸಮಗ್ರ ದೃಷ್ಟಿಕೋನದಿಂದ ನೋಡಿಲ್ಲವೆಂಬುದು ವೇದ್ಯವಾಗುತ್ತದೆ. ಮಕ್ಕಳನ್ನು ಹಡೆದು ಎರವರ ಮನೆಗೆ ಕಳಿಸುವ ಚಿತ್ರ ಜನಪದ ಸಾಹಿತ್ಯದಲ್ಲಿ ಬಹಳ ಅದ್ಭುತವಾಗಿ ನಿರೂಪಿತವಾಗಿದೆ.

"ಕೊಟ್ಟ ಹೆಣ್ಣು ಕುಲಕ್ಕೆ ಹೊರಗು"
"ಜನ್ಮಮೆಚ್ಚ ಕುಣೀ ಮಗಳೇ"
"ಉಕ್ಕುದ್ಮೇಲೆ ಸಾರಲ್ಲ ಸೊಕ್ಕುದ್ಮೇಲೆ ಹೆಣ್ಣಲ್ಲ."
"ಎಣ್ಣೆ ಉಕ್ಕುದ್ರೆ ಕೆಡ್ತು, ಹೆಣ್ಣೊ ಸೊಕ್ಕುದ್ರೆ ಕೆಡ್ತು"
"ಹಟ ಹೆಚ್ಚಿ ಹೆಣ್ ಕೆಡ್ತು, ಚಟ ಹೆಚ್ಚಿ ಗಂಡ್ ಕೆಡ್ತು"
"ಅಕ್ಕ ಇರುವ ತನಕ ಭಾವತನ"
"ಅಪ್ಪಂತೋರ ಮನೆಗೆ ಅಕ್ಕನ ಕೊಡೋವತ್ಗೆ ಅಕ್ಕ ಉಟ್ಟ ಬಟ್ಟೆಯೆಲ್ಲ ತಂಗಿಗಾದೊ"
"ಆವೊತ್ತು ಹೊಟ್ಟೆ ಹಿಡಿಸಿದ್ದು ಈವೊತ್ತು ಮನೆ ಹಿಡಿಸದೆ"

ಎಂಬಿತ್ಯಾದಿ ಗಾದೆಗಳು ಹೆಣ್ಣು ಹೇಗಿರಬೇಕು, ಅವಳ ಗುಣ ಸ್ವಭಾವ ಸ್ಥಿತಿಗತಿಗಳು ಎಂಥದ್ದಿರಬೇಕೆಂಬುದನ್ನು ಸ್ಪಷ್ಟಪಡಿಸುತ್ತವೆ.

"ಹೆಂಗಸಿನ ಬುದ್ಧೀ ಮೊಣಕಾಲ ಕೆಳಗೆ' ಎಂಬ ಗಾದೆಯಿಂದ ಆಕೆಯ ಸ್ಥಾನ, ಬುದ್ಧಿ ಮತ್ತೆ ಯಾರಿಗೇ ಆದರೂ ಅರ್ತವಾಗದಿರದು. 'ಒಲಿದರೆ ನಾರಿ ಮುನಿದರೆ ಮಾರಿ' ಎಂಬಂಥ ಗಾದೆ ಮಾತುಗಳು ಹೆಣ್ಣಿನ ಬಾಳಿನ ಜಟಿಲತೆಯನ್ನು ಜವಾಬ್ದಾರಿಯನ್ನು ಕನ್ನಡಿಸಿ ತೋರುತ್ತವೆಂಬುದು ಸ್ಪಷ್ಟ. ಹೆಣ್ಣು ತಾಯಾಗಿರುವಂತೆ ರಕ್ಕಸಿಯೂ ಆಹಬಲ್ಲಳು. ವಿನಾಶದ ಬೀಜವನ್ನು ಬಿತ್ತಿ ಯುಗವನ್ನೇ ಪರಿವರ್ತಿಸಬಲ್ಲಳು ಎಂಬುದನ್ನು ಸಾರುತ್ತವೆ.

"ಕೋತಿ ಹುಟ್ಟಿ ತ್ವಾಟ ಹಾಳು, ಸೀತೆ ಹುಟ್ಟಿ ಲಂಕೆ ಹಾಳು".

"ಮೂರ್‍ನೂ ಬಿಟ್ಟೋಳು ಯಾರಿಗಂಜಾಳು",

"ತಾಟಗಿತ್ತಿಗೆ ಮೋಟು ಸೆರಗು".

"ಜಾರೆಗೆ ನೀತಿಯಿಲ್ಲ, ಮಾರಿಗೆ ಕರುಣೆಯಿಲ್ಲ."

"ಗಂಡನಿಗೆ ಗಂಜಿ, ಮಿಂಡನಿಗೆ ಬುತ್ತಿ".

"ಕಲ್ತದ ಬಿಡೆ ಕಲ್ಕೇತ್ತಿ ಅಂದ್ರೆ, ಉರನ್ನಾದ್ರೂ ಬಿಟ್ಟೇನು ಕಲ್ತದ ಬಿಡೆ ಅಂದ್ಲಂತೆ.

"ಆಸ್ಗಾರ ಅತ್ತೆಗೆ ರೋಸ್ಗಾರ ಸೊಸೆ".

"ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ".

ಇಂತಹ ಸಾವಿರಾರು ಗಾದೆ ಮಾತುಗಳು ಹೆಣ್ಣಿಗೆ ಸಂಬಂಧಿಸಿದಂತೆ ಜನಪದರು ರಚಿಸಿರುತ್ತಾರೆ.

"ಊಟ ಕೆಟ್ಟರೆ ದಿವಸ ಕೆಟ್ಟಿತು, ಹೆಂಡತಿ ಕೆಟ್ಟರೆ ಜೀವನ ಕೆಟ್ಟಿತು."

ಈ ಗಾದೆ ಮಾತು ಗಂಡ ಹೆಂಡತಿಯರ ಪಾತ್ರದಲ್ಲಿ ಉತ್ತಮ ಹೆಂಡತಿ ಊಟದಷ್ಟೇ ಪ್ರಮುಖಳೆಂಬುದನ್ನು ಸಾದರಪಡಿಸುತ್ತದೆ. ಇಂಥ ದಂಪತಿಗಳ ನಡುವೆ ವಿರಸವುಂಟಾದಲ್ಲಿ ಅದು ಗಂಡ–ಹೆಂಡರ ನಡುವೆ ತಾತ್ಕಾಲಿಕವಾದುದಾಗಿರಬೇಕು.

ತಮ್ಮಲ್ಲಿ ಸಹಾಯ ಮಾಡುವ ಶಕ್ತಿಯಿದ್ದರೂ ಸ್ವಾರ್ಥಕತೆಯ ಸ್ವಭಾವದಿಂದಾಗಿ ಮಹಾ ಕರುಣೆಯುಳ್ಳವರಂತೆ ಮಾತಾಡಿ ಜನಮೆಚ್ಚುಗೆ ಪಡೆಯಲು ಬಯಸುತ್ತಾರೆ. ಅಂಥವರನ್ನು ಕಂಡ ಜನಪದರು ಸುಮ್ಮನಿರದೆ

"ಗಾಣಗಿತ್ತಿ ಅಯ್ಯೋ ಅಂದ್ರೆ ನನ್ನ ಮಗಿನ್ ತಲೆನೊಚ್ಚಗಾಯ್ತು"

"ಗಾಣ್ಗಿತ್ತಿ ಹುಟ್ಟುವಾಗ್ಲೇ ಅವಳ ಕೈ ಸೊಟ್ಟಗೆ"

ಮುಂತಾದ ಗಾದೆಗಳ ಮೂಲಕ ಟೀಕಿಸುತ್ತಾರೆ.

ಕುಂದಗನ್ನಡ ಜನಪದ ಸಂಸ್ಕೃತಿಯಲ್ಲಿ ಆಶ್ಲೀಲವೆಂಬುದು ಮಾತಿನಲ್ಲಿರುವುದಿಲ್ಲ. ನಡತೆಯಲ್ಲಿರುತ್ತದೆ. ಪ್ರೀತಿ, ಪ್ರೇಮ, ಸಂಬಂಧಿಯಾದ ವರ್ತನೆ, ಅಭಿವ್ಯಕ್ತಿ ಪದ ಸಮೂಹಗಳನ್ನು ಸಹಜ ಪ್ರಕ್ರಿಯೆಗಳಾಗಿಯೇ ಪರಿಭಾವಿಸುತ್ತಾರೆ. ಆದ್ದರಿಂದ ಅಂತ ಪದಗಳನ್ನು ನಿಸ್ಸಂಕೋಚವಾಗಿ ಯಾವ ಹಿಂಜರಿಕೆಯಿಲ್ಲದೆ ಜನಪದರು ಬಳಸುತ್ತಾರೆ.

"ಅಕ್ಕುನಿಗೊಟ್ಟು ಲೆಕ್ಕ ಹಾಕ್ಕೊಡು"

"ಅಕ್ಕುನ್ ಗಂಡುನ್ ಜೊತೆ ಜೊತೆ ದು:ಖ ಹೇಳೊಳೋವೊತ್ತೆ ನಿನ್ನಾ ಗಂಡಾ ಮಕ್ಕ್ಳ ಬುಟ್ ನನ್ನತ್ರುಕೆ ಅಂದ್ನಂತೆ"

"ಹೆಸ್ರುಗೆ ಅಪ್ಪ ಸೊಸೆ ತಂದು ಹಸ್ಮಗ ನೀನ್ ಮನಿಕೋ ಅಂತ್ಹೇಳಿ, ಸೊಸೆಯ ಬಸ್ಸು ಮಾಡುದ್ನಂತೆ" ಎಂಬ ಮನೋಸ್ಥಿತಿಯ ಜನರಿರುತ್ತಾರೆ. ಹೀಗೆ ಹೆಣ್ಣನ್ನು ಕುರಿತಂತೆ ಪೌರ್ವಾತ್ಯ ಪಾಶ್ಚಾತ್ಯರರೆನ್ನದೆ, ಅನಾಗರಿಕ ನಾಗರಿಕರೆನ್ನದೆ ಇಡೀ ಮಾನವ ಕೋಟಿಯಲ್ಲಿ ಬಹುಪಾಲು ಜನ ಹೆಣ್ಣನ್ನು ಅನುಮಾನದಿಂದ, ಕಡೆಗಣ್ಣಿನಿಂದ ನೋಡಿರುವುದೇ ಹೆಚ್ಚು.

"ನೀರಿನಲ್ಲಿರೊ ಮೀನನ ಹೆಜ್ಜೆ ಗುರುತಿಸಬಹುದು. ಹೆಣ್ಣಿನ ಮರ್ಮ ಗುರುತಿಸಲು ಸಾಧ್ಯವಿಲ್ಲ" ಎನ್ನುತ್ತದೆ. ಅಲ್ಲದೆ ಹೆಣ್ಣಿನ ಬಗೆಗೆ ಗಾದೆಗಳಲ್ಲಿ ಅನಾದರೆ. ಕಟುವಿಮರ್ಶೆಯನ್ನೇ ಬರೆದಿರುತ್ತಾರೆ.

ಹೀಗೆ ಕುಂದಗನ್ನಡ ಜನಪದ ಸ್ತ್ರೀಯರು ಸಮಾಜದಲ್ಲಿ ಜರುಗುತ್ತಿದ್ದ ಅನ್ಯಾಯ, ಅಧರ್ಮ, ವಂಚನೆ, ಮೋಸ, ಮೇಲು–ಕೀಲುಗಳ ಭಾವನೆ ಮುಂತಾದ ವಾಸ್ತವಾಂಶಗಳನ್ನು ಕಂಡು ಮೌನವಾಗಿರದೇ ಪ್ರತಿಭಟಿಸುತ್ತಿದ್ದರು. ತಮ್ಮ ಮಾರ್ಮಿಕವಾದ ಮಾತುಗಳಲ್ಲಿ ಪ್ರತಿರೋಧವನ್ನು ವ್ಯಕ್ತಪಡಿಸಿರುತ್ತಾರೆ. ಆ ಮೂಲಕ ತನ್ನ ಹಾಗೂ ಸಮಾಜದ ಏಳಿಗೆ, ಶಾಂತಿ ಸಮಾನತೆಯನ್ನು ಉಂಟುಮಾಡುವುದು ಅವರ ಘನ ಉದ್ದೇವಾಗಿತ್ತು.

ಕುಂದಗನ್ನಡ ಜನಪದ ಗಾದೆಗಳಲ್ಲಿ ಸ್ತ್ರೀಯನ್ನು ಕುರಿತಂತೆ ಮೂಡಿ ಬಂದಿರುವ ಗಾದೆಗಳನ್ನು ಗಮನಿಸಿದರೆ ಜಾನಪದ ಸೃಷ್ಟಿಕರ್ತರು ತಾಯಾಗಿ, ಹೆಂಡತಿಯಾಗಿ, ಅತ್ತೆಯಾಗಿ, ಸೊಸೆಯಾಗಿ, ಅಕ್ಕನಾಗಿ, ತಂಗಿಯಾಗಿ, ನಾದಿನಿಯಾಗಿ, ಅತ್ತಿಗೆಯಗಿ, ಓರಗಿತ್ತಿಯಾಗಿ, ಸವತಿಯಾಗಿ, ಬಂಜೆಯಾಗಿ, ವೇಶ್ಯಯಗಿ ನಾನಾ ವಿಧಗಳಲ್ಲಿ ಕಂಡಿದ್ದಾರೆ ಕಂಡಿರಿಸಿದ್ದಾರೆ. ವೇಶ್ಯಾವಾಟಿಕೆಯ ಬಗೆಗೆ ಸಂಬಂಧಿಸಿದಂತೆ ಹೆಚ್ಚಿನ ಗಾದೆಗಳು ಕುಂದಗನ್ನಡ ಜನಪದದಲ್ಲಿವೆ. ಅದಲ್ಲದೇ ಅತ್ತೆ–ಸೊಸೆಯರನ್ನು ಭಾವ–ನಾದಿನಿಯರನ್ನು ಕುರಿತಂತೆ ಸಾಕಷ್ಟು ಗಾದೆಗಳು ಇಲ್ಲಿ ಬಂದಿವೆ.

'ಬಡವನ ಹೆಂಡತಿ ಬೇಲಿಯಲ್ಲಿನ ಹೂವಿನಂತೆ' ಆಕೆ ಜನ ಸಾಮಾನ್ಯರ ಕಣ್ಣಿಗೆ ಬಾಯಿಗೆ ಸುಲಭವಾಗಿ ತುತ್ತಾಗುತ್ತಾಳೆ. ಅವಳನ್ನು ನೋಡಿ ಆಡಿ ದಕ್ಷಿಸಿಕೊಳ್ಳುವುದು ಬಲು ಸುಲಭ. ಕಾರಣ ಆಕೆ ಮೊದಲೇ ಬಡವನ ಹೆಂಡತಿ. 'ಬಡವನ ಕೋಪ ದವಡೆಗೆ ಮೂಲ' ಎಂಬಂತೆ ಅಪ್ಪಿ–ತಪ್ಪಿಯೂ ಪ್ರತಿಭಟಿಸದೆ ಎಲ್ಲವನ್ನೂ ಸಹಿಸಿಕೊಳ್ಳಬೇಕು. ಅವಳ ಶೀಲ, ರೂಪಗಳೇನೇ ಇದ್ದರೂ ನೋಡುವ, ಆಡುವ ಜನಕ್ಕೆ ಮಾತ್ರ ಮೀಸಲು, ಅವಳು ಬೇಲಿ ಮೇಲಿನ ಹೂವಿನಂತೆ ಸುಲಭವಾಗಿ ಸಿಗುವವಳು. ರಕ್ಷಣೆಯಿಲ್ಲದವಳು 'ಬರೀ ಮಗ್ಗುಲಿಗಿಂತ ಕಡೆಯ ಬಡವರ ಹುಡುಗಿ? ಎಂಬ ಗಾದೆ ಕೂಡ ಇದೇ ದುಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ಲೋಕ ಸ್ವಭಾವವೇ ಹೀಗೆ "ಆರು ದೋಸೆ ಕೊಟ್ರೆ ಅತ್ತೆ ಕಡೆ; ಮೂರು ದೋಸೆ ಕೋಟ್ರೆ ಸೊಸೆ ಕಡೆ" ಎಂಬಂತೆ ಅದು ಯಾವಾಗಲೂ ಉಳ್ಳವರ ವಶವಾಗಿರುತ್ತದೆ. "ಹೆಣ್ಣು ಕೊಟ್ಟೆಯೋ ಬೆನ್ನು ಕೊಟ್ಟೆಯೋ" ಕುಂದಗನ್ನಡ ಜನಪದರು ಹೆಣ್ಣು ಕೊಟ್ಟವರ ಅಧೀನಾವಸ್ಥೆಯನ್ನು ಕುರಿತು ನುಡಿದಿರುವ ಅಪೂರ್ವ ನುಡಿಯಿದು. "ಕೊಟ್ಟ ಹೆಣ್ಣು ಕುಲಕ್ಕೆ ಹೊರಗು"– ಹೆಣ್ಣನ್ನು ಹೊತ್ತು ಹೆತ್ತು ಬೆಳಸಿ ಮತ್ತೊಂದು ಮನೆಗೆ ಮದುವೆ ಮಾಡಿಕೊಟ್ಟವರು ಹಲವು ಕಾರಣಗಳಿಗಾಗಿ ಗಂಡನವರಿಗೆ ವಿಧೇಯರಾಗಿ ತಗ್ಗಿ–ಬಗ್ಗಿ ನಡೆಯಬೇಕಾಗುತ್ತದೆ. ಗಂಡನ ಕಡೆಯವರು ಅಂದು ಆಡಿದೆಲ್ಲವನ್ನು ಸುಮ್ಮನೆ ನುಂಗಿಕೊಂಡಿರಬೇಕೆಂಬುದನ್ನು ಸೊಗಸಾಗಿ ಸೂಚಿಸುತ್ತದೆ.

"ಬಡವನ ಹೆಂಡತಿ ಊರಿಗೆಲ್ಲಾ ಅತ್ತಿಗೆ" ಬಡವನ ಹೆಂಡ್ತಿಗೆ ಊರೆಲ್ಲಾ ಅತ್ತೆ" ಹಬ್ಬುಕ್ಕಿ ಇಬ್ಬುರೆಡ್ತೀರ್ ತಂದು ಹಬ್ಬುಕ್ಕಿಲ್ದೆ ಒಬ್ಬುಳ ಮಾರು "ಅಮ್ಮಕ್ಕುನ ಸೀರೆ ತಿಮ್ಮಕ್ಕುನ್ ರವಕೆ ಕಂಡ್ ಕಂಡೋರೆಲ್ಲ ಹುಯ್ಯರ್ಲಾ ಧಾರೆಯ; "ಕಡೇ ಮನೆಯ ಒಡವೆಯಾಕವಳೆ ಅಂದ್ರೆ ಹೇತ ತಿಕ್ಕೆ ಜನಪದರು ಬಹಳ ಮಾರ್ಮಿಕವಾಗಿ ಸೂಚಿಸಿದ್ದಾರೆ.

ಕುಂದಗನ್ನಡ ಜನಪದರ ಅಭಿಪ್ರಾಯದಂತೆ ಕುಟುಂಬದಲ್ಲಿ ಶಾಂತಿ, ನೆಮ್ಮದಿ ನೆಲೆಸಿರಬೇಕಾದರೆ ಮನೆಯೊಡತಿಯ ಪಾತ್ರ ಪ್ರಮುಖವಾದುದು. ಆಕೆ ನೀತಿವಂತೆ, ಪ್ರೀತಿವಂತೆ, ಶೀಲವಂತೆಯಾಗಿರಬೇಕು; ಮನೆ ಮಂದಿಗೆಲ್ಲ ಮಾರ್ಗದರ್ಶಕಳೂ ಆಗಿರಬೇಕು. "ಗರತಿಯಿಂದ ಗೌಡ" ಗೃಹಿಣೀ ಗೃದ ಮುಚ್ಚತೆ" ನೀರಿದ್ರೆ ಊರು ನಾರಿ ಇದ್ರೆ ಮನೆ ಇತ್ಯಾದಿ ಗಾದೆಗಳು ಆಕೆಯ ಸಹನೆ, ತಾಳ್ಮೆ, ಕ್ಷಮೆ, ದಯೆಯನ್ನು ಚಿತ್ರಿಸುವುದರ ಮೂಲಕ ಹೆಣ್ಣೇ ಕುಟುಂಬದಲ್ಲಿ ಮೇಲೆ ಎಂಬುದನ್ನು ಪ್ರಸ್ತುತಪಡಿಸುತ್ತದೆ. ಇಲ್ಲಿ ಹೊರ ಜಗತ್ತಿಗೆ ಯಜಮಾನ ಮುಖ್ಯ ಎನಿಸದರೂ "ಸಂತೇಲಿ ಅವ್ವನ್ನೋಡಿದ್ಮೇಲೆ, ಮನೇಲಿ ಮಗಳ ನೋಡುವುದೇನು? ತಾಯಂತೆ ಮಗಳು, ನೂಲ್ನಂತೆ ಸೀರೆ "ತಾಯಿಲ್ಲದ ಮಕ್ಕಳಿಗೆ ಆಯಿಲ್ಲ ಸಿರಿಲ್ಲ", "ತಾಯಿದ್ರೆ ತವರು ತಂದಿದ್ರೆ ಬಳಗ" ಈ ಮುಂತಾದ ಗಾದೆಗಳು ಹೆಣ್ಣು ಸಂಸಾರದ ಕಣ್ಣು, ಅಂತಹ ಹೆಣ್ಣು ಇಲ್ಲವಾದಾಗ ಸಂಸಾರವೆಂಬ ಕೋಟೆಯ ಭದ್ರತೆ ತಪ್ಪಿ ಮಕ್ಕಳಿಗೆ ಆಸರೆಯಿಲ್ಲದೆ ಅನಾಥ ಪ್ರಜ್ಞೆ ಉಂಟಾಗುತ್ತದೆ.

"ಮಕ್ಕಳಿಲ್ಲದೋಳ್ಗೆ ದಿಕ್ಕಿಲ್ಲ"

"ಹಸಕೊಟ್ ಮನ್ಗೆ ಕರಾನೂ ಕೊಡು"

"ಪಡೆದವಳಿಗೆ ಪಟ್ಟೆ ಸೀರೆ, ಪಡೆಯದವಳಿಗೆ ಮುತ್ತುಗದ ಹಾಳೆ"

"ಕರೀನ್ಮರೇಲಿ ಅಸಾ ಬದಿಕಣ್ತೆ – ಈ ಮುಂತಾದ ಗಾದೆಗಳೂ ಕೂಡ ಕುಂದಗನ್ನಡ ಜನಪದರಲ್ಲಿ ಸ್ತ್ರೀಯರಿಗೆ ಸಂಬಂಧಿಸಿದಂತೆ ರಚನೆಗೊಂಡಿರುವುದು. ಇಲ್ಲಿಯ ಸ್ತ್ರೀಯರು ಎಳೆಮರೆಯ ಕಾಯಿಯಂತೆ ಮತ್ತೊಂದರೆ ಸುಖದ ಮರೆಯಲ್ಲೇ ತನ್ನ ಸುಖ–ಸಂತೋಷಗಳನ್ನು ಕಂಡುಕೊಳ್ಳಬೇಕಾಗುತ್ತದೆ. ಗಂಡನ ಮನೆಯವರಿಗೆಹೆಣ್ಣು ಬೇಡದವಳಾಗಿದ್ದರೂ; ಆಕೆಗೆ ಅತ್ತೆ ಮಾವಂದಿರಿಂದ, ಗಂಡನಿಂದ, ಭಾವ–ಮೈದುನರಿಂದ, ಅತ್ತಿಗೆ–ನಾದಿನಿಯರಿಂದ ಎಂಥ ನರಕ ಸದೃಶ ವಾತಾವರಣವಿದ್ದರೂ ಸಹ ಎಲ್ಲವನ್ನೂ ತಾಳಿಕೊಂಡು ಮಗುವಿನ ಮುಖ ನೋಡಿ ತನ್ನ ಬಾಳನ್ನು ನೂಕಬೇಕಾಗುತ್ತದೆ.

"ಬಂಜೆ ಹೋದಲ್ಲಿ ಸಂಜೆ"

"ಗೂಡ್ ಬಡ್ಡ್ಯಾದೊಡ್ಡಿಗ್ ಬುಟ್ರೂ ಫಲವಿಲ್ಲ"– ಈ ಮುಂತಾದವು ಮಕ್ಕಳಿಲ್ಲದವರ ಬಾಳನ್ನು ಅದೆಂತಹ ದುಸ್ತರವೆಂಬುದನ್ನು ಕುಂದಗನ್ನಡ ಜನಪದ ಸಾಹಿತ್ಯ ನಾನಾ ಬಗೆಯಲ್ಲಿ ಹಾಡಿ ಕಣ್ಣೀರ ಕೋಡಿ ಹರಿಸಿದೆ. ಕುಂದಗನ್ನಡ ಜಾನಪದ ಸೃಷ್ಟಿಕರ್ತರು ಗಾದೆಗಳ ಮೂಲಕ ಹೆಣ್ಣನ್ನು ಹಲವಾರು ಬಗೆಯಲ್ಲಿ ಕಂಡು ಕಂಡಿರಿಸಿದ್ದಾರೆ. ಆಕೆಯನ್ನು ಸಹಾನುಭೂತಿಯಿಂದ ನೋಡದೆ ಅನುಮಾನದಿಂದಲೇ ನೋಡಿದ್ದರೆ, ಆಕ್ಷೇಪಣೆಗಳೇ ಹೆಚ್ಚು.

"ಕೊಟ್ಟ ಹೆಣ್ಣು ಕುಲಕ್ಕೆ ಹೊರಗು"

"ಉಕ್ಕುದ್ಮೇಲೆ ಸಾರಲ್ಲ ಸೊಕ್ಕುದ್ಮೇಲೆ ಹೆಣಲ್ಲ"

"ಎಣ್ಣೆ ಉಕ್ಕುದ್ರೆ ಕೆಡ್ತು. ಚಟ ಹೆಚ್ಚಿ ಗಂಡ್ ಕೆಡ್ತು"

"ಹಟ ಹೆಚ್ಚಿ ಹೆಣ್ ಕೆಡ್ತು. ಚಟ ಹೆಚ್ಚಿ ಗಂಡ್ ಕೆಡ್ತು"

"ಆವೊತ್ತು ಹೊಟ್ಟೆ ಹಿಡಿಸಿದ್ದು ಈವೊತ್ತು ಮನೆ ಹಿಡಿಸದೆ"?

ಈ ಮುಂತಾದ ಗಾದೆಯ ಮಾತುಗಳು ಹೆಣ್ಣು ಹೇಗಿರಬೇಕು. ಅವಳ ಗುಣ ಸ್ವಭಾವ ಸ್ಥಿತಿಗತಿಗಳು ಎಂಥದ್ದಿರಬೇಕೆಂಬುದನ್ನು ಸ್ಪಷ್ಟಪಡಿಸುತ್ತವೆ.

"ಒಲಿದರೆ ನಾರಿ ಮುನಿದರೆ ಮಾರಿ"–ಎಂಬಂಥ ಗಾದೆ ಮಾತುಗಳು ಹೆಣ್ಣಿನ

"ಕೋತಿ ಹುಟ್ಟಿ ತ್ವಾಟ ಹಾಳು, ಸೀತೆ ಹುಟ್ಟಿ ಲಂಕೆ ಹಾಳು"

"ಮೂರ್‍ನೂ ಬಿಟ್ಟೋಳು ಯರಿ ಗಂಜಾಳು"

"ತಾಟಗಿತ್ತಿಗೆ ಮೋಟು ಸೆರಗು"

"ಜಾನಕಿ ನೀತಿಯಿಲ್ಲ, ಮಾರಿಗೆ ಕರುಣೆಯಿಲ್ಲ."

"ಗಂಡನಿಗೆ ಗಂಜಿ, ಮಿಂಡನಿಗೆ ಬುತ್ತಿ"

"ಊಟ ಕೆಟ್ಟರೆ ದಿವಸ ಕೆಟ್ಟಿತು, ಹೆಂಡತಿ ಕೆಟ್ಟರೆ ಜೀವನ ಕೆಟ್ಟಿತು"

"ಒಳಗೆ ಅಮ್ಮನ್‌ಗಾನ ಮೇಲೆ ಗುಮ್ಮನ್ ಗಯಾನ್"–ಈ ಮುಂತಾದ ಗಾದೆಗಳು ಸ್ತ್ರೀಯರ ಬದುಕಿಗೆ ನೇರವಾಗಿ ಸಂಬಂಧಿಸಿರುವಂತೆ ರಚನೆಗೊಂಡಿರುತ್ತದೆ.

ಕುಂದಗನ್ನಡ ಜನಪದ ಸಂಸ್ಕೃತಿಯಲ್ಲಿ ಅಶ್ಲೀಲವೆಂಬುದು ಮಾತಿನಲ್ಲಿರುವುದಿಲ್ಲ. ನಡತೆಯಲ್ಲಿರುತ್ತದೆ. ಪ್ರೀತಿ, ಪ್ರೇಮ ಸಂಬಂಧಿಯಾದ ವರ್ತನೆ, ಅಭಿವ್ಯಕ್ತಿ ಪದ ಸಮೂಹಗಳನ್ನು ಸಹಜ ಪ್ರಕ್ರಿಯೆಗಳಾಗಿಯೇ ಪರಿಭಾವಿಸುತ್ತಾರೆ. ಆದ್ದರಿಂದ ಅಂತ ಪದಗಳನ್ನು ನಿಸ್ಸಂಕೋಚವಾಗಿ ಯಾವ ಹಿಂಜರಿಕೆಯಿಲ್ಲದೆ ಜನಪದರು ಬಳಸುತ್ತಾರೆ.

"ನೀರಿನಲ್ಲಿರೊ ಮೀನಿನ ಹೆಜ್ಜೆ ಗುರುತಿಸಬಹುದು, ಹೆಣ್ಣಿನ ಮರ್ಮವವ ಗುರುತಿಸಲು ಸಾಧ್ಯವಿಲ್ಲ. ಹೀಗೆ ಕುಂದಗನ್ನಡ ಜನಪದದಲ್ಲಿ ಸ್ತ್ರೀಯನ್ನು ಅನುಮಾನದಿಂದ ಕಡೆಗಣ್ಣಿನಿಂದ ನೋಡಿರುವುದೇ ಹೆಚ್ಚು.

ಕುಂದಗನ್ನಡ ಜನಪದ ಒಗಟುಗಳಲ್ಲಿ ಶ್ರೇಷ್ಠ–ಕನಿಷ್ಠಗಳ ಪರಿಕಲ್ಪನೆಯ ನೆಲೆಯಲ್ಲಿ ಗಂಡು–ಹೆಣ್ಣುಗಳ ಸಮೀಕರಣ ನಡೆದಿರುವುದನ್ನು ಕಾಣಬಹುದು. ಹೆಣ್ಣು–ಗಂಡುಗಳೊಂದಿಗೆ ಸಮೀಕರಿಸಲಾದ ವಸ್ತು, ವಸ್ತು ಪರಿಕರ, ಕ್ರಿಯಾವಳಿಗಳು ಯಾವುವು ಹಾಗೂಅವು ಪ್ರತಿಬಿಂಬಿಸುವ ಹೆಣ್ಣುತನ ಏನು ಎನ್ನುವುದನ್ನು ಕಂಡುಕೊಳ್ಳಬೇಕಾಗಿದೆ.

ಹೆಣ್ಣಿನ ಬಗೆಗೆ ಉದ್ದಕ್ಕೂ ಒಂದು ಬಗೆಯ ಭಯ ಮತ್ತು ವಿಸ್ಮಯ ಗಂಡಿಗಿದೆ. ಹೆಣ್ಣು ಯಾವಾಗಲೂ ಗಂಡಿಗೆ ಒಡೆಯಲಾಗದ ಒಗಟಾಗಿರುತ್ತಾಳೆ. ಹೆಣ್ಣಿನ ಕುರಿತ ಈ ತೀವ್ರ ಆತಂಕ ಗಾದೆಗಳಲ್ಲಿ ಹೆಣ್ಣಿನ ಲೈಂಗಿಕತೆಯನ್ನು ನೇರವಾಗಿ ನಿರ್ಭಂದಿಸುವ ಪ್ರಯತ್ನ ಕಂಡರೆ ಒಗಟುಗಳಲ್ಲಿ ಅದನ್ನು ಅನೈತಿಕ ಅಶ್ಲೀಲದ ವ್ಯಂಗ್ಯ ಪರಿಭಾಷೆಯಲ್ಲಿ ನಿಗ್ರಹಿಸಲಾಯಿತು.

1. ಬಿಲಿ ಹೆಣ್ಣಿಗೆ ಗುದ್ದಿದರೆ ನೂರು ಮಕ್ಕಳನ್ನು ಹೆರುತ್ತಾಳೆ (ಬೆಳ್ಳುಳ್ಳಿ)
2. ಒಂದು ಹೆಣ್ಣು ಗಾಳಿಗೆ ಬಸುರಾಗುತ್ತಾಳೆ. ತೊಡೆಯಲ್ಲಿ ಹೆರುತ್ತಾಳೆ (ಅಡಿಕೆ, ಮರ, ಗೊನೆ)

ಹೆಣ್ಣಿನ ಸೌಂದರ್ಯ ಪುರುಷನನ್ನು ಸೆಳೆದಷ್ಟು ಇನ್ನೊಂದು ಸಂಗತಿ ಸೆಳೆದಿಲ್ಲ. ಅದು ಅವನ ಅಹಂಕಾರವನ್ನು ಕೆಣಕಿದ ಪ್ರಶ್ನೆಯೂ ಹೌದು. ಈ ದ್ವಂದ್ವದಲ್ಲಿಯೇ ಹೆಣ್ಣಿನ ಸೌಂದರ್ಯವನ್ನು ಒಗಟುಗಳಲ್ಲಿ ಅಪಹಾಸ್ಯ ಲೇವಡಿ ಮಾಡಲಾಗಿದೆ. ಇಂತಹ ಒಗಟುಗಳು ಮೊದಲು ನೋಟಕ್ಕೆ ಒಂದು ಅಸಹ್ಯ ಭಾವನೆಯನ್ನು ಹುಟ್ಟಿಸುವುದನ್ನು ಕಾಣಬಹುದು.

1. ಒಂದು ಅಜ್ಜಿಗೆ ಮೂರು ತೂತು (ಬೀಸು ಕಲ್ಲು)
2. ಒಂದಜ್ಜಿ ಮೈಯೆಲ್ಲ ಕಜ್ಜಿ (ಹಾಗಲಕಾಯಿ)
3. ಒಂದಜ್ಜಿ ಮೈಯೆಲ್ಲ ತೂತು ತೂತು (ದೋಸೆ) ಈ ಮುಂತಾದ ಒಗಟುಗಳಲ್ಲಿ ಒಂದಜ್ಜಿ ಎನ್ನುವ ವ್ಯವಸ್ಥೆಯನ್ನು ಬೆಳಕಿಗೊಡ್ಡುತ್ತದೆ.

ಶೌಚ–ಅಶೌಚದ ಪರಿಕಲ್ಪನೆಯಲ್ಲಿ ಶುಚಿಗೊಳಿಸುವ ವಸ್ತು–ಪರಿಕರಗಳು ಅಶೌಚವೆಂದು ಗ್ರಹಿಸಲ್ಪಟ್ಟ ವಸ್ತುವಿನ ಸಂಪರ್ಕಕ್ಕೆ ಒಳಗಾಗುವುದರಿಂದ ಆ ವಸ್ತು ಪರಿಕರಗಳು ಅಶೌಚವಾಗಿ ಸ್ವೀಕೃತವಾಗುವುದು. ಊರುಗೇರಿಯ ಹೊಲೆ ತೊಳೆಯುವ ಮಂದಿ, ಅಶುಚಿಯ ಆವರಣವನ್ನು ಶುಚಿಗೊಳಿಸುವ ಪೊರಕೆ ಅಶೌಚವಾಗಿ ಗ್ರಹೀತವಾದದ್ದು. ಹೀಗೆಯೇ ಒಂದಜ್ಜಿ ಊರೆಲ್ಲ ಸುತ್ತಾಡಿ ಮೂಲೆಯಲ್ಲಿ ಕುಳಿತುಕೊಳ್ಳುತ್ತದೆ. (ಪೊರಕೆ) ಈ ಒಗಟಿನಲ್ಲಿ ಹೆಣ್ಣನ್ನು ಪೊರಕೆಯೊಂದಿಗೆ ಸಮೀಕರಿಸಿರುವಲ್ಲಿ ಇದೇ ಅಶೌಚದ ಪರಿಭಾವನೆ ಕೆಲಸ ಮಾಡಿದೆ. ಮೂಲೆಯಲ್ಲಿ ಕುಳಿತುಕೊಳ್ಳುವ ಪೊರಕೆಯ ಸ್ಥಿತಿ ಕುಟುಂಬದಲ್ಲಿನ ಹೆಣ್ಣಿನ ಸ್ಥಾನಮಾನವನ್ನು ಪ್ರತಿಕ್ರಮಿಸಿದೆ. ಹೀಗೆ ಕುಂದಗನ್ನಡ ಜನಪದ ಒಗಟುಗಳ ಪರಿಶೀಲನೆಯಿಂದಾಗಿ ಪುರುಷ ಕೇಂದ್ರಿತ ಸಮಾಜದ ಎಲ್ಲ ಧೋರಣೆಗಳು ಮೌಲ್ಯಗಳು ಹೆಣ್ಣನ್ನು 'ಖಾಸಗಿ'ಗಎ ಸರಿಸಿ ಪುರುಷನನ್ನು 'ಸಾರ್ವಜನಿಕ'ವಾಗಿ ಸ್ಥಾಪಿಸಿವೆ. ಈ ಪ್ರಕ್ರಿಯೆಯ ಮೂಲಕ ಗಂಡು ಹೆಣ್ಣನ್ನು ದುಡಿಸಿಕೊಂಡ ಸಂಗತಿಗಳು ಎದ್ದು ಕಾಣುತ್ತವೆ.

"ಅಪ್ಪ ಆಕಾಶಕ್ಕೆ ಅಮ್ಮ ಪಾತಾಳಕ್ಕೆ
ಮಗ ಸಂಗತಿಗೆ, ಮಗಳು ಮದುವೆಗೆ
(ಅಡಿಕೆ ಮರದ ತುದಿ, ಬೇರು, ಅಡಿಕೆ ಹಿಂಗಾರ)

ಶ್ರೇಷ್ಠ–ಕನಿಷ್ಠದ ಪರಿಕಲ್ಪನೆಯಲ್ಲಿ ಅಪ್ಪ ಬೆಳಕಿನ 'ಮೇಲು ಲೋಕ'ದ ವಿಶಾಲವಾದ ಆಕಾಶವಾದರೆ, ಅಮ್ಮ 'ಕೆಳುಲೋಕ'ದ ಪಾತಾಳದ ಕತ್ತಲೆಯಲ್ಲಿರುವವಳ. ಮಗ ಆರ್ಥಿಕ ಜಗತ್ತಿನ ಪ್ರಧಾನ ಆಕರ್ಷಕ ಕೇಂದ್ರವಾದ ಸಂತೆಯಲ್ಲಿ ವ್ಯವಹರಿಸುವವನಾದರೆ ಮಗಳು ಮದುವೆ ಮನೆಯ ಹೆಣ್ಣುಗಳ ಶೃಂಗಾರಕ್ಕೆ ನೆರವಾಗುವವಳು. ಈ ಒಂದು ಒಗಟು

ಲಿಂಗಪ್ರಭೇದ ನೆಲೆಯಲ್ಲಿ ಒಡೆದ ಹೆಣ್ಣು–ಗಂಡಿನ, ಮೇಲು–ಕೀಳು, ಬೆಳಕು–ಕತ್ತಲೆ, ಖಾಸಗಿ–ಸಾರ್ವಜನಿಕ, ಉತ್ಪಾದಕ–ಅನುತ್ಪಾದಕ ಸ್ಥಿತಿಗಳನ್ನು ರೂಪಕಾತ್ಮಕವಾಗಿ ಮಂಡಿಸುತ್ತದೆ. ಇಂಥ ಹಲವಾರು ಒಗಟುಗಳು ಕುಂದಗನ್ನಡ ಜನಪದದಲ್ಲಿದೆ.

"ಅಪ್ಪನ ದುಡ್ಡು ಎಣಿಸುವುದಕ್ಕೆ ಆಗುವುದಿಲ್ಲ" ಅಮ್ಮನ ಹಾಸಿಗೆ ಮಡಿಸುವುದಕ್ಕೆ ಆಗುವುದಿಲ್ಲ ಎನ್ನುವ ಒಗಟು ಕೂಡ ಗಂಡಿಗೆ ಸಂಬಂಧಿಸಿದ ವಸ್ತು ಪರಿಕರಗಳು ಗೌರವದ ಪ್ರತಿಷ್ಠೆಯ ಸಂಕೇತಗಳಾಗಿರುವುದನ್ನು ಸೂಚಿಸುತ್ತವೆ. ಇದರೊಂದಿಗೆ ಹೆಣ್ಣನ್ನು ಅಗೌರವದಿಂದ ಗುರುತಿಸುವುದನ್ನು ಸೂಚಿಸುತ್ತದೆ.

**ಗ್ರಂಥ ಋಣ**

1. ಅಂಬಳಿಕೆ ಹಿರಿಯಣ್ಣ, 1992
   ಸೈಧಾಂತಿಕ: ಜಾನಪದ ಪ್ರಕಾಶನ, ಮೈಸೂರು–23

2. ಅಂಬಳಿಕೆ ಹಿರಿಯಣ್ಣ, 1994
   ಜಾನಪದ ಕೆಲವು ಅಧ್ಯಯನಗಳು, ಪ್ರಕಟಣೆ : ಕರ್ನಾಟಕ ಜಾನಪದ
   ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು

3. ಕಾಳೇಗೌಡ ನಾಗವಾರ, 1996
   ಜಾನಪದ ಸಾಹಿತ್ಯ, ಪ್ರಕಟಣೆ ಯುಗಾದಿ ಪ್ರಕಾಶನ ಬೆಂಗಳೂರು

4. ಗುಂಡ್ಮಿ ಚಂದ್ರಶೇಖರ ಐತಾಳ 1984
   ಮದ್ದುಂಟೆ ಜನನ ಮರಣಕ್ಕೆ
   ಪ್ರಕಟನೆ: ಆನಂದ ಪ್ರಕಾಶನ, ಮಂಗಳೂರು

5. ಜವರೇ ಗೌಡ 1976
   ಜಾನಪದ ಅಧ್ಯಯನ
   ಪ್ರಕಟನೆ: ಡಿ.ವಿ.ಕೆ ಮೂರ್ತಿ ಮೈಸೂರು

6. ತಪಸ್ವೀ ಕುಮಾರ, 1985
   ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ
   ಪ್ರಕಟನೆ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು